ಇನ್ನುಳಿದ 4 ಯೋಜನೆಗಳಾದ, ಎಮ್ಮಿಗನೂರು, ಬುರಡಿಕಟ್ಟಿ, ಕಮಲಾಪುರ, ಚಿಕ್ಕೆರೂರುಗಳಿಗೆ ಅರ್ಜಿಗಳನ್ನು ಜನವರಿ-97 ರಿಂದ ಜುಲೈ-97ರಲ್ಲಿ ಸಲ್ಲಿಸಿದ್ದು, ಅವುಗಳಿಗೂ ಸಹ ಅರ್ಜಿದಾರರು ಫೆಬ್ರವರಿ ಹಾಗೂ ಏಪ್ರಿಲ್ 1998ರಲ್ಲಿ ಮಂಡಳಿಯ ನಿಯಮಗಳನ್ನು ಪಾಲಿಸಿದ್ದು, ಏಪ್ರಿಲ್ 98ರಲ್ಲಿ ಕಾರ್ಯಾದೇಶವನ್ನು ನೀಡಿ ಕೆಲಸಗಳನ್ನು ಕೈಗೊಳ್ಳಲಾಗಿದ್ದು, ಪ್ರಗತಿಯಲ್ಲಿದೆ.

ಮಡ್ಲೂರ:- ಈ ಯೋಜನೆಗೂ ಸಹ ಸೆಪ್ಟೆಂಬರ್-96 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದರೂ, ಮಂಡಳಿಯ ನಿಯಮಗಳನ್ನು ಏಪ್ರಿಲ್ 98ರಲ್ಲಿ ಪಾಲಿಸಲಾಗಿದ್ದು, ಕಾರ್ಯಾದೇಶವನ್ನು ನೀಡಲಾಗಿದ್ದು, ಕೆಲಸಗಳನ್ನು ಕೈಗೊಳ್ಳಲಾಗಿದೆ.

ಹಿರೇಬೂದಿಹಾಳ, ಹಾದಿಹಳ್ಳಿ, ಹಾಜಿನಕೊಪ್ಪ, ಎಡಗೋಡಗಳಲ್ಲಿ ಏಪ್ರಿಲ್-97 ನಂತರದಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಅವುಗಳಿಗೂ ಸಹ ಅರ್ಜಿದಾರರು ಏಪ್ರಿಲ್-98 ರಲ್ಲಿ ಮಂಡಳಿಯ ನಿಯಮಗಳನ್ನು ಪಾಲಿಸಿದ್ದು, ಇವುಗಳಿಗೂ ಸಹ ಕಾರ್ಯಾದೇಶಗಳನ್ನು ನೀಡಲಾಗಿದೆ. ಕೆಲಸಗಳನ್ನು ತ್ವರಿತವಾಗಿ ಕೈಗೊಳ್ಳಲಾಗುವುದು. ಎಂ.ಕೆ.ಯತ್ನಳ್ಳಿಗೆ ಅಕ್ಟೋಬರ್- 1998ರಲ್ಲಿ ಮಂಡಳಿಯ ನಿಯಮಗಳನ್ನು ಪಾಲಿಸಿದ್ದು, ಅದೇ ತಿಂಗಳಿನಲ್ಲಿಯೇ ಕಾರ್ಯಾದೇಶವನ್ನು ನೀಡಲಾಗಿದೆ. ಕೆಲಸವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ಇನ್ನೂ 8 ಗ್ರಾಮಗಳಿಗೆ ಕುಡಿಯುವ ನೀರಿನ ಯೊಜನೆಗಳಿಗಾಗಿ ಅರ್ಜಿಗಳನ್ನು ಸಲ್ಲಿಸಿದ್ದು, ಈ ಯೋಜನೆಗಳಿಗೂ ಸಹ ಮಂಡಳಿಯು ವಿದ್ಯುತ್ತನ್ನು ಮಂಜೂರು ಮಾಡಿದ್ದು, ಅಂದಾಜುಪಟ್ಟಿಗಳನ್ನು ತಯಾರಿಸಲಾಗಿದ್ದು, ಅರ್ಜಿದಾರರು ಮಂಡಳಿಯ ನಿಯಮಗಳನ್ನು ಪಾಲಿಸಿರುವುದಿಲ್ಲ. ಮಂಡಳಿಯು, ಪಿ.ಹೆಚ್.ಇ. ಹಾಗೂ ವಿಶ್ವಬ್ಯಾಂಕ್ ನೆರವಿನ ಯೋಜನೆಗಳಿಗೆ ಹಾಗೂ ಇತರೆ ಕುಡಿಯುವ ನೀರಿನ ಯೋಜನೆಗಳಿಗೆ ಮಂಡಳಿಯ ನಿಯಮಗಳನ್ನು ಅರ್ಜಿದಾರರು ಪಾಲಿಸದಿದ್ದರೂ, ಕೆಲಸಗಳನ್ನು ಕೈಗೊಳ್ಳಬೇಕೆಂದು ಮಂಡಳಿಯು ತನ್ನ ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದೆ.

ಪ್ರಸ್ತುತ ಸಾಮಗ್ರಿಗಳು ಲಭ್ಯವಿದ್ದು, ಈ ಕೆಲಸಗಳಿಗಾಗಿ ತಾತ್ಕಾಲಿಕ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು, ಕುಡಿಯುವ ನೀರಿನ ಯೋಜನೆಯ ಕೆಲಸಗಳನ್ನು ಆದ್ಯತೆಯ ಮೇರೆಗೆ ಕೈಗೊಂಡು ತ್ವರಿತವಾಗಿ ಮುಗಿಸಲಾಗುವುದು.

ಹಾವೇರಿ ಜಿಲ್ಲೆಯಲ್ಲಿ 98-99ನೇ ಅಬಕಾರಿ ಹರಾಜು

2949:(4007)

ಶ್ರೀ ಯು.ಬಿ.ಬಣಕಾರ್ (ಹಿಗೇಕೆರೂರು): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಾವೇರಿ ಜಿಲ್ಲೆಯಲ್ಲಿ 98-99ನೇ ಸಾಲಿನಲ್ಲಿ ಅಬಕಾರಿ ಗುತ್ತಿಗೆ ಪಡೆದವರ ಹೆಸರು ಹಾಗೂ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)?

2) 31-10-98ರ ವರೆಗೆ ಪ್ರತಿ ತಿಂಗಳು ಗುತ್ತಿಗೆದಾರರರು ಪಾವತಿ ಮಾಡಬೇಕಾಗಿದ್ದ ಹಣ ಎಷ್ಟು? ಹಾಗೂ ಪಾವತಿ ಮಾಡಿದ ಹಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)?

3) ಗುತ್ತಿಗೆದಾರರು ಸರ್ಕಾರದಿಂದ ಪ್ರತಿ ತಿಂಗಳು ಪಡೆದ ಸಾರಾಯಿ ಎಷ್ಟು? ಅವರು ಪ್ರತಿ ತಿಂಗಳು ಎಷ್ಟು ಪಡೆಯ ಬೇಕಾಗಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ್ (ಅಬಕಾರಿ ರಾಜ್ಯ ಸಚಿವರು):

1) ವಿವರಗಳನ್ನು ಅನುಬಂಧ-1ರಲ್ಲಿ ಕೊಟ್ಟಿದೆ.

2) ವಿವರಗಳನ್ನು ಅನುಬಂಧ-2ರಲ್ಲಿ ಕೊಟ್ಟಿದೆ.

3) ಗುತ್ತಿಗೆದಾರರು ಸರ್ಕಾರದಿಂದ ಪ್ರತಿ ತಿಂಗಳು ಪಡೆದ ಸಾರಾಯಿ ಪ್ರಮಾಣದ ವಿವರಗಳು ಅನುಬಂಧ-3ರಲ್ಲಿ ಕೊಟ್ಟಿದೆ. ಪ್ರತಿ ತಿಂಗಳು ಗುತ್ತಿಗೆದಾರರು ಪಡೆಯಬೇಕಾದ ಸಾರಾಯಿ ಪ್ರಮಾಣ ನಿಗದಿಪಡಿಸಿರುವುದಿಲ್ಲ.

ANNEXURE-I

NAME OF THE CONTRACTORS AND RENTAL AMOUNT IN RESPECT OF HAVERI DISTRICT FOR 1998-99

Sl. No.	Taluk	Name	Amount
1.	Haveri	R.Raviprakash, Honnali	29,00,000
2.	Hirekerur	N.V.Kalal, Hirekerur	20,56,600
3.	Byadagi	M.K.Lingaraj, Byadagi	18,17,700
4.	Haveri	R.Raviprakash, Honnali	21,00,000
5.	Ranebannur	N.Harishkumar, Bangalore	31,50,000
6.	Savanur	R.Raviprakash, Honnali	16,00,200
7.	Shiggaon	M.P.Haricharan, Bangalore	15,34,100

ANNEXURE-II

AMOUNT OF RENTALS DUE AS ON 31-1-1998 AND THE AMOUNT PAID BY THE EXCISE CONTRACTORS.

Sl. No.	Taluk	Monthly rentals	Payment of Rentals July 98	Aug.98	Sept.98	Oct.99
1.	Haveri	29,00,000	29,00,00	29,00,000	18,35,000	-
2.	Hanagal	21,00,000	21,00,000	21,00,000	5,00,000	-
3.	Shiggon	15,34,000	15,34,00	15,34,000	15,34,00	-
4.	Savanur	16,00,200	16,00,200	16,00,200	16,00,200	-
5.	Ranebannur	31,50,000	31,50,000	31,50,000	31,30,000	-
6.	Hirekerur	20,56,600	20,56,600	20,56,600	9,00,000	-
7.	Byadagi	18,17,700	18,17,700	18,17,700	12,17,700	-
	TOTAL	1,51,58,600	151,58,600	151,58,600	103,17,000	-

ANNEXURE-III

THE INDENTS PLACED BY THE ARRACK CONTRACTORS FOR THE YEAR 1998-99.

Sl.No.	Taluk	Arrack indented by the Contractor			
		July 98	Aug 98	Sept. 98	Oct. 98
1.	Haveri	39,000	36,500	35,000	34,000
2.	Hanagal	15,000	16,000	16,000	17,000
3.	Shiggaon	10,000	15,500	15,500	18,500
4.	Savanur	11,500	10,000	11,000	12,000
5.	Ranebannur	27,000	31,000	32,000	33,000
6.	Hirekerur	15,000	15,000	16,000	15,500
7.	Byadagi	14,000	12,000	16,000	14,000
	TOTAL	1,30,500	1,36,000	1,43,500	1,44,000